ವಿಷಯ :

ಕದತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:

Maintenance of UGD lines in Singapura areas in Ward No:11 ಅಂದಾಜು ಮೊತ್ತ ರೂ.7.50 ಲಕ್ಷಗಳ ಕಾಮಗಾರಿಯು ಯಲಹಂಕ ವಲಯಕ್ಕೆ 2018–19ನೇ ಸಾಲಿನ 14ನೇ ಹಣಕಾಸು ಅಯೋಗದ ಲೆಕ್ಕ ಶೀರ್ಷಿಕೆ ಪಿ–**3295 (14th Finance commission works-UGD Works)** ಅನುದಾನದಡಿಯಲ್ಲಿ ಸೇರ್ಪಡೆಯಾಗಿರುತ್ತದೆ. ಸದರಿ ಕಾಮಗಾರಿಗೆ ಜಾಬ್ ಸಂಖ್ಯೆ **011-19-000090** ದೊರೆತಿರುತ್ತದೆ. ತದನಂತರ, ಸದರಿ ಕಾಮಗಾರಿಗೆ 2018–19ನೇ ಸಾಲಿನ ಟೋಕೋಪಯೋಗಿ ದರಪಟ್ಟಿ ಹಾಗೂ ಪಿ & ಐಡಬ್ಲ್ಯೂಟಿಡಿ ಬೆಂಗಳೂರು ಸರ್ಕಲ್ ದರಗಳನ್ವಯ ರೂ.7.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಗೆ ಇ–ಪ್ರಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿರುತ್ತದೆ ಸದರಿ ಟೆಂಡರ್‌ನಲ್ಲಿ ಅನುಮೋದಿತ ಗುತ್ತಿಗೆದಾರರಾದ Sri.S.Somashekar ರವರ ಟೆಂಡರ್‌ನ್ನು 2018–19ನೇ ಸಾಲಿನ ಎಸ್.ಆರ್.ದರಪಟ್ಟಿಯಂತೆ ಕನಿಷ್ಠ ದರ ನಮೂದಿಸಿರುವ ಮೊತ್ತ ರೂ.**6,61,924.18** ಗಳಿಗೆ ಕಾಮಗಾರಿ ನಿರ್ವಹಿಸಲು ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಅನುಮೋದನೆ ನೀಡಿದ್ದು. ಅದರಂತೆ ಗುತ್ತಿಗೆದಾರರಾದ Sri.S.Somashekar ರವರಿಗೆ ದಿನಾಂಕ: 06-03-2019 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.

ಮುಂದುವರೆದಂತೆ, ಸದರಿ ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಿದ್ದರಿಂದ ಕೆಲವೊಂದು ಅಂಶಗಳ ಪರಿಮಾಣಗಳು ಹೆಚ್ಚು ಕಡಿಮೆಯಾಗಿದ್ದು, ಸದರಿ ಅಂಶಗಳನ್ನು ಅಳವಡಿಸಿಕೊಂಡು ಹೆಚ್ಚುವರಿ ಪರಿಮಾಣಗಳ (Work Slip) ವಿವರಗಳ ತುಲನಾತ್ಮಕ ಪಟ್ಟಿಯನ್ನು ತಯಾರಿಸಿ ಕಡತದಲ್ಲಿ ಲಗತ್ತಿಸಲಾಗಿರುತ್ತದೆ.

ಸದರಿ ಕಾಮಗಾರಿಯ ವರ್ಕ್ಸ್ ಸ್ಲಿಪ್ ಮೊತ್ತ ರೂ. **1,01,965.26** ಗಳಾಗಿದ್ದು, ಸದರಿ ಮೊತ್ತವನ್ನು ಕಾಮಗಾರಿಯ ಕೆಲವೊಂದು ಅಂಶಗಳ ಉಳಿತಾಯ ಮೊತ್ತದಲ್ಲಿ ಭರಿಸಲಾಗಿರುತ್ತದೆ. ಕಾಮಗಾರಿಯ ಒಟ್ಟು ಮೊತ್ತವು ಅನುಮೋದಿತ ಟೆಂಡರ್ ಮೊತ್ತದ ಮಿತಿಯಲ್ಲಿದ್ದು ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಾಗಿರುವುದಿಲ್ಲ.

ಸದರಿ ಕಾಮಗಾರಿಯನ್ನು ಕೋವಿಡ್–19 ಹಾಗೂ ವೈಯಕ್ತಿಕ ಕಾರಣದಿಂದಾಗಿ ಕಾಮಗಾರಿಯನ್ನು ನಿಗಧಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದೆ ಇದ್ದುದರಿಂದ ಕಾಮಗಾರಿಯ ಕಾಲಾವಧಿಯನ್ನು ದಿನಾಂಕ: 31–12–2022 ರವರೆಗೆ ದಂಡ ರಹಿತವಾಗಿ ವಿಸ್ತರಿಸಲು ಕೋರಿರುತ್ತಾರೆ. ಪ್ರಸ್ತುತ ಸದರಿ ಕಾಮಗಾರಿಯು ಶೇ.**100%** ರಷ್ಟು ಪೂರ್ಣಗೊಂಡಿರುತ್ತದೆ.

ಅದ್ದುದರಿಂದ ಮೇಲಿನ ಎಲ್ಲಾ ವಿವರಗಳನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಕಾಮಗಾರಿಯ ವರ್ಕ್ಸ್ ಸ್ಲಿಪ್ ಮೊತ್ತ ರೂ.**1,01,965.26** (ಶೇಕಡವಾರು ಹೋಲಿಸಿದಾಗ **13.60%** ರಷ್ಟು)ಗಳಿಗೆ ಅನುಮೋದನೆ ಹಾಗೂ ಸದರಿ ಕಾಮಗಾರಿಯ ಕಾಲಾವಧಿಯನ್ನು ದಂಡ ರಹಿತವಾಗಿ ದಿನಾಂಕ: ~~31-01-2023~~ 31-01-2023 ರವರೆಗೆ ವಿಸ್ತರಿಸಲು ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

ಸ.ಅ

ಸಹಾ.ಪಾ.ಅ(ಯೋ.ವಿ)

Asst. Executive Engineer
Project Division
Yelahanka Zone
BBMP, Bangalore - 92

ಕಾ.ಪಾ.ಅ(ಯೋ.ವಿ–ಯ.ವ)

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ಪುಟದ ಸಂಖ್ಯೆ ..... 14 .....

ಕಡತದ ಸಂಖ್ಯೆ .....

ಕ್ರಮ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು (ಯೋಜನೆ)

(51) ಕಂಡಿಕೆ (44) ಮತ್ತು (50) ರಲ್ಲಿ ವಿವರಿಸಿರುವಂತೆ Maintenance of UGD lines in Singapura areas in ward no:11 (Kuvempunagara) ಎಂಬ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಮಂಜೂರಾದ ಪರಿಮಾಣಗಳಲ್ಲಿ ಕೆಲವು ಪರಿಮಾಣಗಳಲ್ಲಿ ವ್ಯತ್ಯಾಸ ಕಂಡುಬಂದಿದ್ದರಿಂದ ಹಾಗೂ ಮುಖ್ಯ ಅಭಿಯಂತರರು ಸ್ಥಳ ಪರಿಶೀಲನೆ ಸಮಯದಲ್ಲಿ ಸೂಚಿಸಿರುವಂತೆ ಮಾರ್ಪಾಡು ಅಂದಾಜು ಪಟ್ಟಿ ತಯಾರಿಸಲಾಗಿದ್ದು ಅದರಂತೆ Workslipನ ಮೊತ್ತವು **101965.26ಗಳಾಗಿದ್ದು** ಅನುಮೋದಿತ ಮೊತ್ತಕ್ಕೆ ಹೋಲಿಸಿದಾಗ **ಶೇಕಡ.13.60%** ರಷ್ಟಿರುತ್ತದೆ. ಆದುದರಿಂದ ಸದರಿ ಕಾಮಗಾರಿಯ Workslipಗೆ ಅನುಮೋದನೆ ನೀಡಲು ಹಾಗೂ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ತೆಗೆದುಕೊಂಡಿರುವ ದಿನಗಳಿಗೆ Covid-19 ರ ಹಿನ್ನಲೆಯಲ್ಲಿ ಹಾಗೂ ಸ್ಥಳದ ಅಭಾವವಿದ್ದುದ್ದರಿಂದ ದಂಡ ವಿಧಿಸದೇ EOT ಅನುಮೋದಿಸಲು ಕೋರಿ ಕಡತ ಸಲ್ಲಿಸಿದೆ.

Executive Engineer
Project Division
Yelahanka Zone
BBMP, Bangalore-92

ಕಾರ್ಯಪಾಲಕ ಅಭಿಯಂತರರು(ಯೋಜನೆ)
ಯಲಹಂಕ ವಲಯ

(52) ಮುಖ್ಯ ಅಭಿಯಂತರರು (ಯ.ವ)

ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗರವರು ತಿಳಿಸಿರುವಂತೆ **Maintenance of UGDlines in Singapura areas in ward no-11 (Kuvempunagara).** ಕಾಮಗಾರಿಯನ್ನು ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ಪಟ್ಟಿಯಲ್ಲಿನ ಮಂಜೂರಾದ ಪರಿಮಾಣಗಳಿಗಿಂತ ಕೆಲವು ಅಂಶಗಳು ಹೆಚ್ಚು/ಕಡಿಮೆಯಾಗಿರುತ್ತದೆ ಅದರಂತೆ ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಪರಿಮಾಣದ ಅಂಶಗಳು ಈ ಕೆಳಕಂಡಂತಿರುತ್ತದೆ.

1. ಕಾಮಗಾರಿಯ ಅಂದಾಜು ಮೊತ್ತ ರೂ.**7.50**ಲಕ್ಷಗಳು
2. ವರ್ಕ್‌ಸ್ಲಿಪ್ ಮೊತ್ತ ರೂ.**1,01,965.26(13.60%)**ಗಳು

ಮೇಲ್ಕಂಡ ಮೊತ್ತವನ್ನು ಟೆಂಡರ್ ಕಾಮಗಾರಿಯ ಉಳಿತಾಯ ಮೊತ್ತದಲ್ಲಿ ಭರಿಸಲು. ವರ್ಕ್‌ಸ್ಲಿಪ್‌ಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ)ರವರು ಅನುಮೋದನೆ ಕೋರಿದ್ದು, ಮುಂದಿನ ಆದೇಶಕ್ಕೆ ಸಲ್ಲಿಸಿದೆ.

(53) ಮುಖ್ಯ ಅಭಿಯಂತರರು (ಯ.ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ

Scanned by TapScanner